

# ಪಟ್ಟಾಯದಲ್ಲಿ ಆಯುತ್ಥಾಯ

ಪಟ್ಟಾಯದ 'ಮಿನಿಯೇಚರ್ ಪಾರ್ಕ್'ನಲ್ಲಿ ಜಗತ್ತಿನ ಎಲ್ಲ ಅದ್ಭುತಗಳ ಪ್ರತಿಕೃತಿಗಳಿದ್ದರೂ ನನ್ನನ್ನು ತುಂಬ ಆಕರ್ಷಿಸಿದ್ದು 'ಆಯುತ್ಥಾಯ ಸಂಕೀರ್ಣ'ದ ಅದ್ಭುತ ಸಮುಚ್ಛಯ. ಅಲ್ಲಿ ರಚಿಸಿದ್ದ ಒಂದೊಂದು ಪುಟ್ಟಪುಟ್ಟ ರಚನೆಗಳೂ ಯಾವುದೋ ಮಾಯಾಲೋಕದ ಭವ್ಯನಗರಿಯೊಂದರ ಪ್ರತಿರೂಪದಂತೆ ಇದ್ದವು. ಅದರ ಹೊಳಪು, ಮಾದರಿ, ಅಂದಚಂದಕ್ಕೆ ಬೆರಗಾಗಿ, ಅದೇನು, ಎಲ್ಲಿದೆ ಎಂದು ಫಲಕ ನೋಡಿದರೆ ಪೂರ್ತಿ ನಿರಾಶೆ. 'ಅಯುತ್ಥಾಯ' 'ವಾಟ್ ಫ್ರಾ...' ಇತ್ಯಾದಿ ಥಾಯ್ ಭಾಷೆಯ ಪದಜೋಡಣೆಗಳಷ್ಟೆ ಕಂಡವು. ಎಲ್ಲಿದೆ, ಏನು ಎನ್ನುವುದು ಕಡೆಗೂ ತಿಳಿಯಲಿಲ್ಲ. ಹೆಚ್ಚು ಇಂಗ್ಲಿಷ್ ಬಾರದ ಗೈಡ್‌ನಿಂದಲೂ ಮಾಹಿತಿ ಸಿಗಲಿಲ್ಲ.

ಬ್ಯಾಂಕಾಕ್ ಹೋಟೆಲ್ಲಿನ 'ಸೈಟ್ ಸೀಯಿಂಗ್' ಕಿರುಹೊತ್ತಗೆಯಲ್ಲಿ ಪ್ರವಾಸೀ ತಾಣವೊಂದರ ಜಾಹೀರಾತು ಹೆಚ್ಚುಕಡಿಮೆ ಹಾಗೇ ಇತ್ತು. ಆಗ ಸಿಕ್ಕಿದ್ದೇ 'ಗ್ರಾಂಡ್ ಪ್ಯಾಲೇಸ್'. ಈ ಬ್ರೋಷರ್‌ನಲ್ಲಿದ್ದ ಮಾಹಿತಿಗಳಿಂದ ತಿಳಿದಿದ್ದು, 'ಆಯುತ್ಥಾಯ' ಎಂದರೆ ಅಯೋಧ್ಯೆ. ರಾಮಾಯಣವನ್ನು ತಮ್ಮ ಪವಿತ್ರ ಮಹಾಕಾವ್ಯವೆಂದು ಪರಿಗಣಿಸಿದ್ದ ಸಯಾಮ್ (ಇಂದಿನ ಥಾಯ್ಲೆಂಡ್) ದೊರೆಗಳು ಅಂದು ಅಯೋಧ್ಯೆಯಂತೆ ನಿರ್ಮಿಸಿಕೊಂಡಿದ್ದ ರಾಜಧಾನಿಯೇ 'ಆಯುತ್ಥಾಯ'. ಇಲ್ಲಿಯ ರಚನೆಗಳು ರಾಮನ ಕಾಲದ ಅಯೋಧ್ಯೆಯಂತೆ ಅತ್ಯದ್ಭುತವಾಗಿ, ಥಾಯ್ ಶೈಲಿಯಲ್ಲಿ ನಿರ್ಮಾಣವಾದ ನಗರಿ.

13ರಿಂದ 17ನೇ ಶತಮಾನದವರೆಗೂ ಸುವರ್ಣಯುಗ ಕಂಡಿದ್ದ ಈ ನಗರ, ಬರ್ಮೀಯರ ದಾಳಿಯಲ್ಲಿ ಶಿಥಿಲಗೊಂಡ ಮೇಲೆ, ಪಕ್ಕದಲ್ಲಿದ್ದ ಬ್ಯಾಂಕಾಕ್‌ನಲ್ಲಿ ಆ ವೈಭವಗಳ ಪ್ರತಿಕೃತಿಗಳೊಂದಿಗೆ ನೂತನ ರಾಜಧಾನಿಯನ್ನು ನಿರ್ಮಿಸಲಾಯಿತು. ಇಂದು ಆ ಹಳೆಯ ಶಿಥಿಲಗೊಂಡ ಆಯುತ್ಥಾಯ, ಪ್ರಾಚೀನ ಪಳೆಯುಳಿಕೆಗಳ ಸ್ಮಾರಕವಾಗಿ, ಯುನೆಸ್ಕೋದ 'ವಿಶ್ವ ಪಾರಂಪರಿಕ ತಾಣ'ವಾಗಿ ಸಂರಕ್ಷಿಸಲ್ಪಟ್ಟಿದೆ. ಬ್ಯಾಂಕಾಕಿನಿಂದ ನೂರು ಕಿ.ಮೀ. ದೂರದ ದ್ವೀಪದಲ್ಲಿರುವ ಈ ತಾಣ ಪ್ರವಾಸಿಗರ ಬಹುದೊಡ್ಡ ಆಕರ್ಷಣೆ.

ಥಾಯ್ಲೆಂಡಿಗೆ ಹೋದರೆ 'ಆಯುತ್ಥಾಯ' ಸ್ಮಾರಕಗಳಿಗೂ ಭೇಟಿ ನೀಡಿ. ಆದರೆ, ಅದರ ಹಳೆಯ ವೈಭವವನ್ನು ಅರಿಯಬೇಕಾದರೆ ಈ ಗ್ರಾಂಡ್ ಪ್ಯಾಲೇಸನ್ನು ಮರೆಯದೆ ನೋಡಿ. ಇದನ್ನು ನೋಡದಿದ್ದರೆ ನಾವೊಂದು ಮನುಷ್ಯನಿರ್ಮಿತ ಅತ್ಯದ್ಭುತ ನಿರ್ಮಾಣವನ್ನು ಕಾಣುವುದರಿಂದ ವಂಚಿತರಾದಂತೆಯೇ.

ಇದು ಅನ್ವರ್ಥ ಹೆಸರಿನ ಅರಮನೆ ಸಮುಚ್ಛಯ. ಈ ಹಿಂದೆ ಹೇಳಿದಂತೆ ಆಯುತ್ಥಾಯದ ದುರಂತದ ಬಳಿಕ ಸಯಾಮೀ ದೊರೆಗಳು ನಿರ್ಮಿಸಿದ ನೂತನ ರಾಜಧಾನಿ ಬ್ಯಾಂಕಾಕ್‌ನಲ್ಲಿ 1782ರಲ್ಲಿ ರಚಿತವಾದ ಅರಮನೆಯಿದು. 150 ವರ್ಷಗಳ ಕಾಲ ಸಂಪೂರ್ಣ ರಾಜಪ್ರಭುತ್ವಕ್ಕೆ ಸಾಕ್ಷಿಯಾಗಿದ್ದ ಈ ಅರಮನೆ, ಇಂದು ಆಧುನಿಕತೆಗೆ ತೆರೆದುಕೊಂಡ ಪ್ರಜಾಪ್ರಭುತ್ವದ ಆಡಳಿತಾಂಗಗಳ ಚಟುವಟಿಕೆಗಳ ತಾಣ. ಒಂದಿಷ್ಟು ಪ್ರಭುತ್ವ ಉಳಿಸಿಕೊಂಡಿರುವ ದೊರೆಗಳ ಕುಟುಂಬದ ವಾಸ್ತವ್ಯ, ಯಜಮಾನಿಕೆ, ಚಟುವಟಿಕೆಗಳ ತಾಣವೂ ಹೌದು.

**ಥಾಯ್ಲೆಂಡಿಗೆ ಹೋದರೆ 'ಆಯುತ್ಥಾಯ' ಸ್ಮಾರಕಗಳಿಗೆ ಭೇಟಿ ನೀಡಿ. ಆದರೆ, ಅದರ ಹಳೆಯ ವೈಭವವನ್ನು ಅರಿಯಬೇಕಾದರೆ ಈ ಗ್ರ್ಯಾಂಡ್ ಪ್ಯಾಲೇಸನ್ನು ಮರೆಯದೆ ನೋಡಿ.**

■ ಚಿತ್ರ- ಲೇಖನ:
ಎಸ್.ಪಿ. ವಿಜಯಲಕ್ಷ್ಮಿ